ಶಿಕ್ಷಣದ ಹಕ್ಕು

ಸರ್ವ ಶಿಕ್ಷಣ ಅಭಿಯಾನ

ಎಲ್ಲರೂ ಕಲಿಯೋಣ-ಎಲ್ಲರೂ ಬೆಳೆಯೋಣ

**ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು – 560 001**

ಸಂಖ್ಯೆ: ಸಶಿಅ/ಆ/ಸಿ5/ಬಿ.ಆರ್.ಪಿ/ಸಿ.ಆರ್.ಪಿ/ಪರೀಕ್ಷೆ/2017 ದಿನಾಂಕ: 24-03-2017

**ಜ್ಞಾಪನ**

ವಿಷಯ: 2017-18 ನೇ ಸಾಲಿಗೆ ಬ್ಲಾಕ್ ಸಂಪನ್ಮೂಲ ವ್ಯಕ್ತಿ ಮತ್ತು ಸಮೂಹ ಸಂಪನ್ಮೂಲ ವ್ಯಕ್ತಿಗಳ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವ ಕುರಿತು.

ಉಲ್ಲೇಖ:
1) ಈ ಕಛೇರಿಯ ಅಧಿಕೃತ ಜ್ಞಾಪನ ಸಂಖ್ಯೆ: ಸಶಿಅ/ಆ/ಸಿ5/ಬಿ.ಆರ್.ಪಿ/ಸಿ.ಆರ್.ಪಿ/ಪರೀಕ್ಷೆ/2017, ದಿನಾಂಕ: 09.03.2017.
2) ಸರ್ಕಾರದ ಆದೇಶ ಸಂಖ್ಯೆ : ಇಡಿ 644 ಪಿಬಿಎಸ್ 2010, ಬೆಂಗಳೂರು, ದಿನಾಂಕ : 01.04.2011
3) ಆಯುಕ್ತರು, ಸಾ.ಶಿ.ಇ. ಬೆಂಗಳೂರು, ರವರ ಸುತ್ತೋಲೆ ಸಂಖ್ಯೆ: ಸಿ3(2) ಪ್ರಾ.ಶಿ/ಇತರೆ ಸುತ್ತೋಲೆ/2016-17, ದಿನಾಂಕ: 02.07.2016.
4) ನಿರ್ದೇಶಕರು (ಪ್ರೌಢ ಶಿಕ್ಷಣ), ಆಯುಕ್ತರ ಕಛೇರಿ, ಸುತ್ತೋಲೆ ಸಂಖ್ಯೆ: ಸಿ4(1) ಪ್ರೌಶಿಹೆಶಿಸ್ಥ:09/2014-15, ದಿನಾಂಕ: 04.04.2016.
5) ಈ ಕಛೇರಿಯ ಜ್ಞಾಪನ ಪತ್ರ ಸಂಖ್ಯೆ: ಸ.ಶಿ.ಅ./ಆ/ಸಿ5/ಬಿ.ಆರ.ಪಿ/ಸಿ.ಆರ್.ಪಿ./ಪರೀಕ್ಷೆ/2017, ದಿನಾಂಕ: 13-03-2017.

****************

ಮೇಲಿನ ವಿಷಯ ಹಾಗೂ ಉಲ್ಲೇಖಿತ ಪತ್ರ 3ರಂತೆ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿನ ಕೆಲವು ಶಿಕ್ಷಕರ ಹುದ್ದೆಗಳನ್ನು ಹೆಚ್ಚುವರಿಯೆಂದು ಗುರ್ತಿಸಿ ಅವಶ್ಯಕತೆ ಇರುವ ಶಾಲೆಗಳಿಗೆ ಶಿಕ್ಷಕರನ್ನು ಸ್ಥಳಾಂತರ ಮಾಡಲಾಗಿದೆ. ಅಂತಹ ಶಿಕ್ಷಕರುಗಳಲ್ಲಿ ಲಿಖಿತ ಪರೀಕ್ಷೆಯನ್ನು ತೆಗೆದುಕೊಳ್ಳುವ ಅಪೇಕ್ಷೆ ಉಳ್ಳವರಾಗಿದ್ದು, ಹಾಲಿ ಶಾಲೆಯಲ್ಲಿ 2 ವರ್ಷ ಪೂರ್ಣಗೊಳಿಸದೆ ಇದ್ದಾಗ್ಯೂ ಸಹ, ಅವರ ಹಿಂದಿನ ಶಾಲೆಯಲ್ಲಿ ಸಲ್ಲಿಸಿದ ಸೇವೆಯು 2 ವರ್ಷ ಎಂಬುದನ್ನು ಆಯಾ ಜಿಲ್ಲಾ ಉಪ ನಿರ್ದೇಶಕರು (ಆ) ರವರು ಖಚಿತಪಡಿಸಿಕೊಂಡು ಅರ್ಹರಿಗೆ ಪರೀಕ್ಷೆ ತೆಗೆದುಕೊಳ್ಳಲು ಅವಕಾಶ ಕಲ್ಪಿಸುವುದು." ಎಂದು ಉಲ್ಲೇಖಿತ (5) ರ ಜ್ಞಾಪನದಲ್ಲಿ ಸೂಚಿಸಲಾಗಿತ್ತು.

ಅದೇ ಪ್ರಕಾರವಾಗಿ ಉಲ್ಲೇಖ 4ರಂತೆ ಸರ್ಕಾರಿ ಪ್ರೌಢಶಾಲೆ ಸಹಶಿಕ್ಷಕರು, ಹೆಚ್ಚುವರಿ ಎಂದು ಗುರುತಿಸಲ್ಪಟ್ಟು, ಅವಶ್ಯಕತೆ ಇರುವ ಸರ್ಕಾರಿ ಪ್ರೌಢ ಶಾಲೆಗಳಿಗೆ ಸ್ಥಳಾಂತರಗೊಂಡಿರುವ ಶಿಕ್ಷಕರು, ಬಿ.ಆರ್.ಪಿ (ಪ್ರೌಢ) ಹುದ್ದೆಗೆ ಅರ್ಜಿ ಸಲ್ಲಿಸಿದ್ದಲ್ಲಿ ಪರಿಗಣಿಸಲು ಸೂಚಿಸಿದೆ. ಉಳಿದಂತೆ ಪರೀಕ್ಷಾ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ರಾಜ್ಯ ಯೋಜನಾ ನಿರ್ದೇಶಕರು
**ಸರ್ವ ಶಿಕ್ಷಣ ಅಭಿಯಾನ**

**ಇವರಿಗೆ ಕ್ರಮಕ್ಕಾಗಿ**

1) ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು (ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ ಸೂಕ್ತ ಕ್ರಮಕ್ಕಾಗಿ.
2) ರಾಜ್ಯದ ಎಲ್ಲಾ ಉಪನಿರ್ದೇಶಕರು (ಅಭಿವೃದ್ಧಿ).
3) ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳ ಅಗತ್ಯ ಕ್ರಮಕ್ಕಾಗಿ.

**ಪ್ರತಿ ಸಂಬಂಧಿಸಿದವರಿಗೆ ಮಾಹಿತಿಗೆ ಕಳುಹಿಸಿದೆ:**

1) ಮಾನ್ಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2) ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.
3) ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ.
4) ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರಗಿ.
5) ನಿರ್ದೇಶಕರು, ಪ್ರಾಥಮಿಕ ಶಿಕ್ಷಣ, ಆಯುಕ್ತರ ಕಛೇರಿ, ಬೆಂಗಳೂರು.
6) ನಿರ್ದೇಶಕರು, ಪ್ರೌಢ ಶಿಕ್ಷಣ, ಆಯುಕ್ತರ ಕಛೇರಿ, ಬೆಂಗಳೂರು.
7) ನಿರ್ದೇಶಕರು (ಕಾ), ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು.
8) ಕಛೇರಿ ಪ್ರತಿ.